ಹೇಳಿಬಿಡಬೇಕು ಎಂದು ಗಟ್ಟಿ ಮನಸ್ಸು ಮಾಡಿಕೊಂಡರು. ಇದೀಗ ತಾವು ಡೆಹ್ರಾಡೂನಿನಲ್ಲಿರುವುದು ಇದ್ದಕ್ಕಿದ್ದಂತೆ ನೆನಪಾಗಿ... ಯಾವುದಕ್ಕೂ ಇರಲಿ, ಪ್ರಭುದೇವಸ್ವಾಮಿಗಳು ತಮ್ಮೂರಿನಲ್ಲಿ ಬಿಡಾರ ಹೂಡಿರುವಾಗಲೇ ಊರ ಕಡೆ ಹೋಗುವುದಾಗಲೀ ಅವರ ಮುಖ ನೋಡುವುದಾಗಲೀ ಬೇಡ; ಅವರು ಬಿಡಾರ ಮುಗಿಸಿ ಒಂದೆರಡು ವಾರವಾದ ನಂತರವೇ ಡೆಹ್ರಾಡೂನ್ ಬಿಡುವುದೆಂದು ತೀರ್ಮಾನ ಮಾಡಿಕೊಂಡರು. ಹಾಗೆಂದುಕೊಳ್ಳುತ್ತಲೇ ಲ್ಯಾಪ್‌ಟಾಪಿನಲ್ಲಿ ಇಂಟರ್‌ನೆಟ್ ಓಪನ್ ಮಾಡಿ, ಬ್ಯಾಂಕ್ ಅಕೌಂಟ್ ಮೇಲೆ ಕಣ್ಣಾಡಿಸುತ್ತಾ, ಕೋಟಿ ರೂಪಾಯಿ ಟಾರ್ಗೆಟ್ ತಲುಪಲು ಇನ್ನೆಷ್ಟು ಲಕ್ಷ ಬಾಕಿಯಿದೆ ಎಂದು ಹುಡುಕುತ್ತಾ ಕರಕರ ಲೆಕ್ಕ ಗೀಚಿಕೊಳ್ಳತೊಡಗಿದರು. ಅಕಸ್ಮಾತ್ ಈ ಟಾರ್ಗೆಟ್ ಬೇಗ ತಲುಪಿದರೆ, ಆ ಟಾರ್ಗೆಟ್ಟನ್ನು ಇನ್ನಷ್ಟು ವಿಸ್ತರಿಸಿಕೊಳ್ಳಲು ಬೇಕಾದ ಹಣದ ಮೂಲಗಳು ಎಲ್ಲೆಲ್ಲಿವೆ ಹುಡುಕಿ ನೋಡು ಎಂದು ಅಪ್ಪಣೆ ಮಾಡಲು ತಮ್ಮ ನೆಚ್ಚಿನ ಬಂಟ ರಾಮರಾಯನಿಗೆ ಫೋನ್ ಮಾಡಲು ಅಣಿಯಾದರು...

ಹಾಂ! ಅಕಸ್ಮಾತ್ ನಾಳೆ ಸಂಜೆ ಡೆಹ್ರಾಡೂನಿನ 'ಸತ್ಸಂಗ ಕಮ್ಮಟ'ದ ಆ ವಿಭೂತಿ ಹಣೆಯ ಮಹಿಳೆಯೂ, ಗಾಜಿನ ಕಣ್ಣುಗಳ ಮುದುಕರೂ ಮತ್ತೊಮ್ಮೆ ತನಗೆ ಭಾಷಣ ಮಾಡಲು ಅವಕಾಶ ಕೊಟ್ಟರೆ... ಸಾವಿನ ಕಾರಣಿಕಗಳನ್ನು ಮೀರಲು ತನಗೆ ಈಚೆಗೆ ಹೊಳೆಯುತ್ತಿರುವ ಹೊಚ್ಚ ಹೊಸ ಮಾರ್ಗಗಳನ್ನೆಲ್ಲ ಕೊನೆಯ ಪಕ್ಷ ಒಂದು ಕತೆಯ ರೂಪದಲ್ಲಾದರೂ ಹೇಳಿ ನೆರೆದವರ ಮನ ರಂಜಿಸಬೇಕೆಂದು ರುದ್ರಣ್ಣ ಕತೆ ಕಟ್ಟಲು ಶುರು ಮಾಡಿದರು. ತಮ್ಮ ಸರ್ವೀಸಿನಲ್ಲಿ ಈವರೆಗೆ ಎಂದೂ ಮಾತಾಡಿರದಷ್ಟು ನಿಜವಾಗಿ ಹಾಗೂ ಪ್ರಾಮಾಣಿಕವಾಗಿ ಈ ಸಂಜೆ ಮಾತಾಡಿಬಿಡಬೇಕು; ಸಾವಿನ ಭಯವನ್ನು ಒದ್ದೋಡಿಸುವ ತಮ್ಮ ಈ ತಾಜಾ ಕಾಣ್ಕೆಗಳ ಬಗ್ಗೆ ತಮ್ಮ ಹಳ್ಳಿ ಸೊಗಡಿನ ಭಾಷೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಮಾತಾಡಿ, ಎಲ್ಲರ ಮನ ಗೆಲ್ಲಬೇಕೆಂಬ ಕಾತರದಿಂದ ಮೇಲೆದ್ದರು.

## ನಟರಾಜ್ ಹುಳಿಯಾರ್

ಕವಿ, ಕತೆಗಾರ, ಕಾದಂಬರಿಕಾರ, ವಿಮರ್ಶಕ, ಅಂಕಣಕಾರ, ನಾಟಕಕಾರ. 'ಮತ್ತೊಬ್ಬ ಸರ್ವಾಧಿಕಾರಿ', 'ಮಾಯಾ ಕಿನ್ನರಿ', 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' (ಕಥಾಸಂಗ್ರಹಗಳು), 'ಗಾಳಿ ಬೆಳಕು' (ಅಂಕಣ), 'ಶೇಕ್‌ಸ್ಪಿಯರ್ ಮನೆಗೆ ಬಂದ', 'ಮುಂದಣ ಕಥನ' (ನಾಟಕಗಳು), 'ರೂಪಕಗಳ ಸಾವು' (ಕವಿತೆ), 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' (ಸಂಶೋಧನೆ), 'ಇಂತಿ ನಮಸ್ಕಾರಗಳು' (ಸಾಂಸ್ಕೃತಿಕ ಕಥಾನಕ), 'ಕಾಮನ ಹುಣ್ಣಿಮೆ' (ಕಾದಂಬರಿ), 'ಪ್ರಜಾವಾಣಿ' ಅಂಕಣ ಬರಹಗಳ ಪುಸ್ತಕ 'ಕನ್ನಡಿ', 'ಶಾಂತವೇರಿ ಗೋಪಾಲಗೌಡ' (ಜೀವನ ಚರಿತ್ರೆ) ಅವರ ಕೆಲವು ಪುಸ್ತಕಗಳು. ಪಿ. ಲಂಕೇಶ್ ಅವರ ಆಯ್ದ ಬರಹಗಳ ಇಂಗ್ಲಿಷ್ ವಾಚಿಕೆ 'ಡಾರ್ಕ್ ಅರ್ತ್' ಇತ್ತೀಚೆಗೆ ಪ್ರಕಟವಾಗಿದೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕರು.